ಆರು ತಿಂಗಳ ಕಾಲ ಕಳೆದು ಹೋಗಿತ್ತು. ಮತ್ತು ಅಣ್ಣ ತಂಗಿ ಇಬ್ಬರೂ ಕೂಡಾ ರಾತ್ರೆಯ ಊಟವಾದ ಮೇಲೆ ಆ ದೊಡ್ಡ ಕಂಪ್ಯೂಟರ್ ಪರದೆಯೆದುರು ಕುಳಿತು ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದುದು ಅವಳ ಗಮನಕ್ಕೆ ಬಂದಿತ್ತು.

ಇಂಗ್ಲಿಷ್ ಅವಳಿಗೆ ಅಪರಿಚಿತವಾದ ಭಾಷೆಯೇನಾಗಿರಲಿಲ್ಲ. ಅವಳು ಅದೇ ಮೊಹಲ್ಲಾದಲ್ಲಿನ ಉರ್ದು ಹೈಯರ್ ಪ್ರೈಮರಿ ಶಾಲೆಯಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಳು. ಇಂಗ್ಲಿಷ್‌ನಲ್ಲಿ ಸರಾಗವಾಗಿ ಮಾತನಾಡಲು ಬರದಿದ್ದರೇನಾಯಿತು, ಕೂಡಿಸಿ ಮಾತನಾಡುವಷ್ಟು ಸಾಮರ್ಥ್ಯ ಇದ್ದ ಮೇಲೆ ಅರ್ಥವಾಗದಿರುತ್ತದೆಯೇ? ಹೀಗಾಗಿ ಅವಳ ಕಿವಿ ಮೇಲೆ ಬಿದ್ದ ಚೂರು ಪಾರು ಇಂಗ್ಲೀಷಿನ ಆಧಾರದ ಮೇಲೆ ನಯಾಜ್ ಈಗಾಗಲೇ ಅವಳ ಫೋಟೋವನ್ನು ಇಂಟರ್‌ನೆಟ್‌ನಲ್ಲಿ ಹಾಕಿರಬಹುದು ಎಂಬ ಅವಳ ಊಹೆ ನಿಜವಾಯಿತು.

ಅವಳು ಏನೇನೋ ಕೆಲಸವನ್ನು ಹೊಂಚಿಕೊಂಡು ಅಡ್ಡಾಡುತ್ತಾ ತನ್ನ ಮಕ್ಕಳ ಮೇಲೆ ಮತ್ತು ಅವರ ತುದಿ ಬೆರಳಿನಲಿ ಆಡುತ್ತಿದ್ದ ಕಂಪ್ಯೂಟರಿನ ಮೇಲೆ ಒಂದು ಕಣ್ಣಿಟ್ಟು ನಿರುಕಿಸಿದಾಗ ಅನೇಕ ಯುವಕರ ಫೋಟೋಗಳು ಒಂದರ ನಂತರ ಒಂದು ಕಂಪ್ಯೂಟರ್ ಪರದೆಯ ಮೇಲೆ ಮೂಡಿ ಮಾಯವಾಗುತ್ತಿದ್ದವು. ಸುಮಾರು ಹದಿನೈದು ದಿನಗಳವರೆಗೆ ಈ ವ್ಯೂಹ ನಡೆಯುತ್ತಾ ನಡೆಯುತ್ತಾ ಕೊನೆಗೂ ಒಂದು ದಿನ ನಯಾಜ್ ತನ್ನ ತಾಯಿಯ ಎರಡೂ ಭುಜಗಳನ್ನು ತನ್ನೆರಡೂ ಕೈಗಳಲ್ಲಿ ಬಾಚಿ ಕೊಂಡು ಬಂದು ಆಕೆಯನ್ನು ಕಂಪ್ಯೂಟರಿನ ಎದುರಿನ ಕುರ್ಚಿಯಲ್ಲಿ ಕೂರಿಸಿದ. ಮತ್ತು ಕಂಪ್ಯೂಟರಿನಲ್ಲಿ ಒಬ್ಬೊಬ್ಬ ಯುವಕನ ಫೋಟೋ ಕ್ಲಿಕ್ಕಿಸುತ್ತಾ 'ನೋಡಿ ಅಮ್ಮಿ, ಈ ಹುಡುಗ ಆದೀತಾ... ಈ ಹುಡುಗ ಹೇಗೆ? ನಿಮ್ಮ ಅಳಿಯನಾಗುವವ ಹೀಗಿದ್ದರೆ ಸಾಕೇ?' ಎಂದು ತರೆಹೇವಾರಿ ಯುವಕರ ಫೋಟೋಗಳನ್ನು ಅವಳೆದುರಿಗೆ ಹರವಿ ಬಿಟ್ಟ. ನಾಜೂಕಾಗಿ ತಮ್ಮ ಕೈಚೀಲದಿಂದ ಒಂದೊಂದೇ ಫೋಟೊ ತೆಗೆದು ಅವಳ ಅಪಾರ ನಿರೀಕ್ಷೆಗಳನ್ನು ತಣಿಸುವ ಏಕೈಕ ಪರಿಹಾರೋಪಾಯವೇನೋ ಎಂದು ಪ್ರದರ್ಶಿಸುತ್ತಿದ್ದ ಮತ್ತು ಅವರ ಪ್ರವರಗಳನ್ನು ಹೇಳುತ್ತಾ ಆಸೆ ಹುಟ್ಟಿಸುತ್ತಿದ್ದ ಮಧ್ಯವರ್ತಿಗಳಂತೆ ನಯಾಜ್ ಅವಳಿಗೆ ಕಂಡು ಬಂದ. ಇಷ್ಟೊಂದು ವರಗಳ ಅನ್ವೇಷಣೆಯನ್ನು ನಡೆಸಿರಬೇಕಾದಲ್ಲಿ ಕಂಪ್ಯೂಟರಿನ ಬಿಲ್ ಎಷ್ಟು ಬರುತ್ತದೋ ಎಂದು ಅವಳಿಗೆ ಗಾಬರಿಯಾಯಿತು. ಪರದೆಯ ಮೇಲೆ ಮೂಡಿದ್ದ ಒಬ್ಬ ಯುವಕ ಚೆನ್ನಾಗಿದ್ದಾನೆ ಎಂದು ಅನ್ನಿಸುವಷ್ಟರಲ್ಲಿಯೇ ಕಂಪ್ಯೂಟರಿನ ಅಪಾರ ಮೊತ್ತದ ಬಿಲ್ಲನ್ನು ಕಲ್ಪಿಸಿಕೊಂಡು ಅವಳು ಗಾಬರಿಗೊಂಡಳು. 'ಅಲ್ಲಪ್ಪಾ ಇಷ್ಟೆಲ್ಲಾ ಹುಡುಗರನ್ನು ಕರೆಸಿದೀಯಲ್ಲ ನೀನು. ಇದಕ್ಕೆ ಬಿಲ್ ಎಷ್ಟು ತಗಲುತ್ತೆ?' ಎಂದು ಕೇಳಿದಳು. ನಯಾಜ್‌ಗೆ ನಗು ತಡೆಯಲಾಗಲಿಲ್ಲ ಅಜ್ರಾ ಕೂಡಾ ನಕ್ಕು ನಕ್ಕು ಕೆಂಪಾದಳು. ಅವಳಿಗೆ ಕೆಡುಕೆನಿಸಿತು. ಕಂಪ್ಯೂಟರಿನೊಂದಿಗೆ ಆಟವಾಡುವ ಈ ಮಕ್ಕಳೆದುರಿಗೆ ತಾನೆಷ್ಟು ಅಜ್ಞಾನಿ ಎಂದು ಅವಳಿಗೆ ಕೀಳರಿಮೆಯುಂಟಾಯಿತು.

ಅಂತೂ ನಯಾಜ್ ತನ್ನ ತಾಯಿಗೆ ಹೊಸ ಆವಿಷ್ಕಾರಗಳ ಪರಿಚಯವನ್ನು ಮಾಡಿಸಿ, ಅಂತರ್ಜಾಲದ ಅನೇಕ ತಾಣಗಳಲ್ಲಿ ಸುಳಿದಾಡಿಸಿ ಅವಳನ್ನು ಹೊರತಂದಾಗ ಅವಳಿಗೆ ಮತ್ತು ಬಂದಂತಾಗಿತ್ತು. ಇದೇನೋ ಅದ್ಭುತ ಲೋಕ ಎಂದು ಅವಳಿಗೆ ಅನ್ನಿಸಿದರೂ ಇದೊಂದು ಅಪಾಯಕಾರಿಯಾದ ಭ್ರಮಾಲೋಕ ಎಂತಲೂ ಅನಿಸತೊಡಗಿತು. ಬಾಲ್ಯದಲ್ಲಿ ತನ್ನ ತಾಯಿಯ ಹತ್ತಿರ ಗೋಳಾಡಿ ನಾಲ್ಕಾಣೆ ಕೊಂಡು ಹೋಗಿ, 'ಬೊಂಬೈ ದೇಖೋ, ದಿಲ್ಲಿ ಕಾ ತಾಜ್‌ಮಹಲ್ ದೇಖೋ' ಎಂದು ರಾಗವಾಗಿ ಹಾಡುತ್ತಿದ್ದ, ಆ ರಾಗಕ್ಕೆ ತಕ್ಕವಾಗಿ ತನ್ನ ಎರಡೂ